ಹಿಂದಿರುಗಿ ವೇಗವಾಗಿ ಹೊರಟು ಹೋದ.

ಬೆಳಿಗ್ಗೆ ಋತು ಕಣ್ಬಿಡುವ ವೇಳೆಗೆ ರಮ್ಯ ಯಾವಾಗಲೋ ಎದ್ದು ಕೆಳಗಿಳಿದು ಹೋಗಿದ್ದಳು. ತೆರೆದ ಕಿಟಕಿಯಿಂದ ತಂಗಾಳಿ ಒಳನುಗ್ಗಿತ್ತು. ಸುತ್ತಲೂ ಮಾವಿನ ತೋಪಿನ ಹಸಿರು ಕಂಗಳಿಗೆ ತಂಪೆರೆದರೆ ಹಕ್ಕಿಗಳ ಚಿಲಿಪಿಲಿ ಮನಸ್ಸಿಗೆ ಮುದ ನೀಡಿತು. ಬಚ್ಚಲಿಗೆ ಹೋಗಿ ಮುಖ ತೊಳೆದು ಬರುವಷ್ಟರಲ್ಲಿ ರಮ್ಯ ಕಾಫಿಯೊಂದಿಗೆ ಹಾಜರಿದ್ದಳು. ಅವಳ ಜೊತೆಗೆ ತಮ್ಮ ಎಂದಿನ ಶುಭ್ರ ಬಿಳಿಯ ಜುಬ್ಬಾ ಧರಿಸಿದ, ಅರೆನೆರೆತ ಗಡ್ಡ ಮೀಸೆಯನ್ನು ಹೊಂದಿರುವ ಹರಿಕೃಷ್ಣ...! ಈ ದಿನ ಅವರ ಮುಖ ಪ್ರಶಾಂತವಾಗಿತ್ತು. ಯೋಗಿಯ ಕಣ್ಣುಗಳಲ್ಲಿ ಮಾತ್ರವೇ ಕಾಣಬಹುದಾದ ಒಂದು ಅಲೌಕಿಕ ಹೊಳಪು ಅವರ ಕಂಗಳಲ್ಲಿತ್ತು.

'ಅಪ್ಪಾಜಿ ನೀವು?' ಆಶ್ಚರ್ಯದಿಂದ ಕೇಳುತ್ತಲೇ ಬಾಗಿ ಅವರಿಗೆ ನಮಸ್ಕರಿಸಿದಳು ಋತು.

'ಏಳು ಮಗು..' ಎನ್ನುತ್ತಾ ಹರಿಕೃಷ್ಣ ಅವಳ ತೋಳನ್ನು ಹಿಡಿದೆತ್ತಿದರು.

'ಮೊದ್ಲು ಕಾಫಿ ಕುಡಿ ಋತು, ಚಳಿಗೆ ಆರಿ ಹೋಗುತ್ತೆ....' ರಮ್ಯ ಕಾಫಿಯ ಬಟ್ಟಲನ್ನು ಕೈಗಿತ್ತಳು. ಹರಿಕೃಷ್ಣರು ಋತುವನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಂಡು ವಾತ್ಸಲ್ಯದಿಂದ ಅವಳ ಮುಂದಲೆ ಸವರಿದರು.

'ಇವತ್ತು ಬೆಂಗಳೂರಿಗೆ ಹೋಗ್ತಿದ್ದೀರಂತೆ, ಬಂದ ಎರಡು ದಿನಗಳಲ್ಲಿ ನೀನು ನಮ್ಮ ಮನೆಮಗಳೇ ಆಗಿಬಿಟ್ಟೆ ಋತು, ರಮ್ಯಾಳ ಜೊತೆ ಆಗಾಗ ಬರ್ತಿರು..' ಎಂದವರು ಸ್ವಲ್ಪ ತಡೆದು 'ನಿನ್ನ ಹಾಗೂ ಹೇಮಂತನ ವಿಷಯವನ್ನು ರಮ್ಯ ಹೇಳಿದ್ಲು ಮಗು, ನಂಗೆ ತುಂಬಾ ಸಂತೋಷವಾಯ್ತು, ನಿನ್ನ ಆಯ್ಕೆ ತಪ್ಪಾಗಿರಲ್ಲ ಅನ್ನೋ ನಂಬಿಕೆ ಇದೆ, ನೀನು ಹೇಮಂತನನ್ನು ಮದುವೆಯಾಗಿ ಸುಖವಾಗಿರು... ನಮ್ಮ ರಮ್ಯಾಳ ವಿಷಯವೂ ನಿಂಗೆ ಗೊತ್ತಿರುತ್ತೆ ಅಲ್ವಾ, ಮದ್ವೆಯಾದ್ರೂ ಅವಳು ಒಂಟಿಯಾಗಿ ಬಾಳುವಂತಾಯ್ತು, ಅವಳೇನೋ ಧೈರ್ಯವಾಗಿದ್ದಾಳೆ, ಆದರೆ ತಂದೆಯಾಗಿ ನಾನು ಹಾಗಿರಲು ಆಗುತ್ತಾ ಋತು, ನಾನು ಚೆನ್ನಾಗಿರುವಾಗಲೇ ಅವಳಿಗೊಬ್ಬ ಯೋಗ್ಯ ವರನನ್ನು ಹುಡುಕ್ಬೇಕು...'

ಹರಿಕೃಷ್ಣರು ಇಷ್ಟು ಹೇಳುವಾಗಲೇ ಅವರ ಕಂಠ ಬಿಗಿದು ಕಂಗಳಲ್ಲಿ ನೀರಾಡಿದ್ದನ್ನು ರಮ್ಯ ಗಮನಿಸಿದಳು. ಎಷ್ಟೇ ಯೋಗಿಯಾದರೂ ವಾತ್ಸಲ್ಯಮಯಿ ತಂದೆಯಲ್ಲವೇ?....ಮಗಳ ಮೇಲೆ ಅವರಿಗಿರುವ ಕಾಳಜಿ ಸಹಜವೇ....

'ಅಪ್ಪಾಜಿ ನೀವೇನೂ ಯೋಚಿಸ್ಬೇಡಿ, ರಮ್ಯಾಳಿಗೆ ತಕ್ಕ ಸಂಗಾತಿ ಸಿಕ್ಕೇ ಸಿಗ್ತಾನೆ..' ಎಂದವಳು ರಮ್ಯಾಳತ್ತ ನೋಡಿದಳು. ಅವಳು ಮೌನವಾಗಿದ್ದಳು. ಆದರೆ ಆ ಮೌನದ ಹಿಂದಿನ ಕಾರಣವನ್ನು ಋತು ಗಮನಿಸಬಲ್ಲವಳಾಗಿದ್ದಳು.

'ನೀವು ಸ್ನಾನ ತಿಂಡಿ ಮುಗಿಸಿ ಬಿಡಿ, ನನ್ನ ಪರಿಚಯದ ಡ್ರೈವರೊಬ್ಬರನ್ನು ಜೊತೆ ಮಾಡಿ ನಮ್ಮ ಕಾರಿನಲ್ಲೇ ನಿಮ್ಮಿಬ್ರನ್ನೂ ಕಳಿಸ್ತೀನಿ...' ಎಂದ ಹರಿಕೃಷ್ಣರು ಮತ್ತೆ ತಡ ಮಾಡದೆ ಕೆಳಗಿಳಿದು ಹೊರಟು ಹೋದರು. ಅವರಿಗೆ ತಾವು ಹೊರಡುತ್ತಿರುವುದು ಮನಸ್ಸಿಗೆ ನೋವಾಗಿದೆಯೆನಿಸಿತು ಋತುವಿಗೆ. ದೇವಣ್ಣನಂತೂ ಅವರಿಬ್ಬರು ಹೊರಡುತ್ತಿರುವ ವಿಷಯ ತಿಳಿದು ಪೇಚಾಡಿಕೊಂಡ. ಅವರಿಗಿಷ್ಟವಾದ ತಿಂಡಿಯನ್ನು ಮಾಡಿ ಬಡಿಸಿದ.

'ಮನೆ ಮಗಳೇ ಈ ಮನೆಗೆ ಬಂದ ಹಾಗಿತ್ತು ತಾಯಿ, ಈ ಎರಡು ದಿನ ನಮ್ಮ ಪ್ರಕೃತಿ ನಸುನಗುತ್ತಿದ್ಲು, ನೀವಿಬ್ರೂ ಇನ್ನು ಹೊರಡುಬಿಡ್ತೀರ, ಯೋಗ ಯೋಗ ಎಂದು ಬಡಬಡಿಸುವ ಆ ಅಯ್ಯನ ಜೊತೆ ನಾನಿನ್ನು ಕಾಲ ಕಳೀಬೇಕು...' ದೇವಣ್ಣ ತಮಾಷೆಯಾಗಿ ಮಾತನಾಡಿದರೂ ಅವನ ಧ್ವನಿಯಲ್ಲಿದ್ದ ಏಕಾಂಗಿ ಭಾವನೆಯನ್ನು ಅವನಿಂದ ಅಳಿಸಲಾಗಲಿಲ್ಲ. ಅವರು ಸಿದ್ಧವಾಗುವ ಹೊತ್ತಿಗೆ ಡ್ರೈವರೂ ಹಾಜರಿದ್ದ.

ದೊಡ್ಡ ಗೇಟಿನ ಬಳಿ ನಿಂತು ವಿದಾಯ ಹೇಳಿದ ವಾಮನಮೂರ್ತಿ ದೇವಣ್ಣನನ್ನೂ, ಯೋಗಿಯಂತಿರುವ ಅಪ್ಪಾಜಿಯನ್ನೂ ಬೀಳ್ಕೊಟ್ಟು ಕಾರು ಮುನ್ನಡೆದಿತ್ತು.

ಋತುವಿನ ಕಂಗಳು ತುಂಬಿ ಬರತೊಡಗಿದ್ದವು. ನಂದಿಬೆಟ್ಟವೂ ಸೇರಿದಂತೆ ಸುತ್ತಲೂ ಆವರಿಸಿಕೊಂಡಿರುವ ಎತ್ತರವಾದ ಬೆಟ್ಟಗಳು, ಭವ್ಯ ನಂದಿ ದೇವಾಲಯದ ಗೋಪುರ ಕಣ್ಣಿಂದ ನಿಧಾನವಾಗಿ ಮರೆಯಾಗತೊಡಗಿತ್ತು. ನೂರಾರು ವರ್ಷಗಳನ್ನು ಕಂಡಿರುವ ಬೋಳು ಬಂಡೆಗಳು, ಅಂಗಡಿ ಮುಂಗಟ್ಟುಗಳು, ಕೋತಿಗಳ ಗುಂಪು, ಒಂದೆರಡು ರೆಸಾರ್ಟ್‌ಗಳು, ಗುಡಿಸಲುಗಳು, ಹಳ್ಳಿಯ ಜನರು, ಅವರು ಸಾಕಿರುವ ಕುರಿ ಕೋಳಿಗಳು, ಎಲ್ಲವನ್ನೂ ದಾಟಿಕೊಂಡು ಕಾರು ಮುನ್ನಡೆಯತೊಡಗಿತ್ತು.

'ಈಗೀಗ ಈ ನಂದಿ ತಪ್ಪಲಿನಲ್ಲಿ ಟೂರಿಸ್ಟ್‌ಗಳಿಗಾಗಿ ರೆಸಾರ್ಟ್‌ಗಳು ಆರಂಭವಾಗ್ತಿವೆ ಋತು, ಬಹಳಷ್ಟು ಡೆವಲಪರ್ಸ್‌ಗಳು ಅಲ್ಲಲ್ಲಿ ಲೇಔಟ್‌ಗಳನ್ನು ಕಟ್ಟುವ ಉತ್ಸಾಹದಲ್ಲಿದ್ದಾರೆ, ಈ ಹಳ್ಳಿಯ ಸೊಗಡು, ಇಲ್ಲಿನ ಜನರ ಮುಗ್ಧತೆ, ಇಲ್ಲಿನ ಬಂಡೆಗಳು, ಇವೆಲ್ಲಾ ಇನ್ನೆಷ್ಟು ದಿನ ಎಂದು ಹೇಳೋಕಾಗಲ್ಲ, ಯಾಕೇಂದ್ರೆ ಬೆಂಗಳೂರೆಂಬ ಮಾಯಾನಗರಿ ಬೆಳೆಯುತ್ತಲೇ ಇದೆ, ತನ್ನ ಕಬಂಧ ಬಾಹುಗಳನ್ನು ನಾಲ್ಕೂ ಕಡೆ ವಿಸ್ತಾರವಾಗಿ ಚಾಚುತ್ತಲೇ ಇದೆ, ಎಲ್ಲೆಲ್ಲಿಂದಲೋ ದುಡ್ಡಿದ್ದವರು ಬಂದು ಸೇರುತ್ತಾರೆ, ಫ್ಲಾಟ್ ಕೊಳ್ಳುತ್ತಾರೆ, ಅವರ ನೆಸೆಸಿಟಿಗೆ ನಮ್ಮ ನೆಲ ಜಲ ಖಾಲಿಯಾಗುತ್ತೆ, ನಗರದ ಕಸವನ್ನು ತನ್ನೊಡಲಲ್ಲಿ ಸುರಿದುಕೊಂಡು ನರಳುತ್ತಿರುವ ಮಂಡೂರಿನ ಗ್ರಾಮದ ಸ್ಥಿತಿಯೇ ಉಳಿದ ಬಡಪಾಯಿ ಹಳ್ಳಿಗಳಿಗೆ ಬರುವ ದಿವಸವೂ ದೂರವಿಲ್ಲ, ಇದು ಈಗಿನ ಸ್ಥಿತಿ, ಮುಂದೇನೋ ಗೊತ್ತಿಲ್ಲ...' ರಮ್ಯ ಆವೇಶಗೊಂಡವಳಂತೆ ಮಾತನಾಡಿದಾಗ ಋತು ಅವಳಿಗೆ ಸಾಂತ್ವನ ನೀಡುವಂತೆ ಅವಳನ್ನು ತನ್ನ ಭುಜಕ್ಕೆ ಆನಿಸಿಕೊಂಡಳು.

ಕಿರುರಸ್ತೆಯಲ್ಲಿ ಸುಮಾರು ಅರ್ಧ ಗಂಟೆ ಪ್ರಯಾಣಿಸಿದಾಗ ಹೈದರಾಬಾದ್ ಮುಖ್ಯ  ರಸ್ತೆ ಕಂಡಿತು. ಅಲ್ಲಿ ಬಲ ತಿರುವನ್ನು ತೆಗೆದುಕೊಳ್ಳುವ ವೇಳೆಗೆ ಆ ದಿನ ಹಿಂಬಾಲಿಸಿ ಬಂದಿದ್ದ ಅದೇ ಕಪ್ಪು ಕಾರು ಈ ದಿನವೂ ತಮ್ಮನ್ನು ಹಿಂಬಾಲಿಸುತಿರುವುದನ್ನು ಇಬ್ಬರೂ ಗಮನಿಸಿದರು.

'ಋತು, ಕೇಸರಿ ಬಟ್ಟೆ ಧರಿಸಿ ಎರಡು ದಿನಗಳಿಂದ ನಿನ್ನ ಹಿಂಬಾಲಿಸುತ್ತಿದ್ದ ಆ ಕಳ್ಳ ಸಾಧು ಈಗ ಕಾರಿನಲ್ಲಿ ಬರ್ತಿದ್ದಾನೆ ನೋಡು....' ರಮ್ಯಾಳ ಕುಚೋದ್ಯಕ್ಕೆ ಋತು ಪ್ರತಿಕ್ರಿಯಿಸಲಿಲ್ಲ. ಅವಳಿಗೆ ಪಂಜರದೊಳಗಿನ ಗಿಳಿಯ ನೆನಪಾಯಿತು. ಮನೆಯಂಗಳದಲ್ಲಿ ಎಷ್ಟೇ ಸುತ್ತು ಹಾಕಿದರೂ ಆ ಗಿಣಿ ಮನೆಯೊಡೆಯನ ಕಣ್ಣಳತೆ ಮೀರಿ ಹೋಗಲಾರದು. ತನ್ನ ಸ್ಥಿತಿಗೂ, ಪಂಜರದೊಳಗಿನ ಗಿಳಿಯ ಸ್ಥಿತಿಗೂ ಅಂಥ ವ್ಯತ್ಯಾಸವಿಲ್ಲವೆನಿಸಿತು. ಒಂದು ಗಂಟೆ ಪ್ರಯಾಣಿಸಿದ ಮೇಲೆ ಬೆಂಗಳೂರು ಹತ್ತಿರವಾಯಿತು. ಒಂದು ಕಡೆ ಡ್ರೈವರ್ ಗಕ್ಕನೆ ಬ್ರೇಕು ಹಾಕಿದ್ದ. ಮುಂದೆ ಬಹಳಷ್ಟು ಜನರು ಗುಂಪುಗೂಡಿದ್ದರು. ಪೊಲೀಸರು ಅಲ್ಲಲ್ಲಿ ಓಡಾಡಿಕೊಂಡಿದ್ದರೆ, ಆಂಬ್ಯುಲೆನ್ಸಿನ ಸದ್ದು ಕೇಳತೊಡಗಿತು.

'ಯಾವುದೋ ಆಕ್ಸಿಡೆಂಟು ಆಗಿದೆ ಅಂತ ಕಾಣುತ್ತೆ, ಇರಿ....ಇಳಿದು ಹೋಗಿ ನೋಡಿ ಬರ್ತೀನಿ....' ಎಂದ ಡ್ರೈವರ್ ಹತ್ತು ನಿಮಿಷದೊಳಗೆ ಹಿಂದಿರುಗಿದ್ದ.

'ಪಾಪ, ಯಾವುದೋ ಫ್ಯಾಮಿಲಿ, ಐದು ಜನರಿದ್ದ ಕಾರಿಗೆ ಹಿಂದಿನಿಂದ ಲಾರಿಯೊಂದು ಅಪ್ಪಳಿಸಿದೆ....ಇಬ್ಬರು ಸತ್ತು ಹೋಗಿದ್ದಾರೆ, ಮತ್ತಿಬ್ಬರಿಗೆ ಗಂಭೀರ ಗಾಯಗಳಾಗಿವೆಯಂತೆ, ಅವರನ್ನು ಆಂಬ್ಯುಲೆನ್ಸಿನಲ್ಲಿ ಹಾಸ್ಪಿಟಲ್ಲಿಗೆ ಕರೆದುಕೊಂಡು ಹೋಗ್ತಿದ್ದಾರೆ, ಯಾರು ಯಾರ ಮೃತ್ಯು ಎಲ್ಲಿ ಹೇಗೆ ಬರೆದಿರುತ್ತೋ ಯಾರಿಗ್ಗೊತ್ತು, ಏನಂದ್ರೂ ನಾವು ಇಲ್ಲಿಂದ ಹೊರಡೋಕೆ ಇನ್ನೂ ಒಂದು ಗಂಟೆ ಲೇಟಾಗ್ಬಹುದು, ನೀವು ಕುಳಿತಿರಿ, ನಾನು ಹೊರಗೆ ಹೋಗಿ ಬರ್ತೀನಿ....'

ಎಂದವನು ಕೆಳಗಿಳಿದು ಹೊರಟೇಹೋದ.

ರಮ್ಯ ಇಯರ್ ಫೋನನ್ನು ಸಿಕ್ಕಿಸಿಕೊಂಡು ತನಗಿಷ್ಟವಾದ ಹಾಡುಗಳನ್ನು ಕೇಳತೊಡಗಿದರೆ ಋತು ಕಣ್ಮುಚ್ಚಿ ಕುಳಿತುಕೊಂಡಳು. ಆದರೆ ಮನಸ್ಸು ಆಕ್ಸಿಡೆಂಟಿನ ಬಗ್ಗೆಯೇ ಯೋಚಿಸತೊಡಗಿತ್ತು.

ಮನುಷ್ಯ ಆಧುನಿಕನಾಗುತ್ತಾ ಬಂದ ಹಾಗೆ ಅಪಾಯಗಳೂ ದಿನಕ್ಕೊಂಡು ಹೊಸ ಅವತಾರವೆತ್ತಿ ಬರುತ್ತಲೇ ಇದೆಯಲ್ಲ, ಅದರಲ್ಲೂ ಬೆಂಗಳೂರಿನಂತಹ ಮಹಾನಗರಗಳಲ್ಲಿ ರಸ್ತೆ ಅಪಘಾತಗಳಂತೂ ಸರ್ವೇ ಸಾಧಾರಣ, ಯಾರದೋ ನಿರ್ಲಕ್ಷಕ್ಕೆ ಮತ್ಯಾರೋ ಬಲಿಯಾಗುತ್ತಾರೆ, ಆಕ್ಸಿಡೆಂಟುಗಳ ಸರಣಿ ಮುಂದುವರಿಯುತ್ತಲೇ ಇರುತ್ತದೆ, ಏನೂ ಆಗದಂತೆ ಮಹಾನಗರ ಮೈ ಕೊಡವಿಕೊಂಡು ತನ್ನ ಎಂದಿನ ಗಡಿಬಿಡಿಯಲ್ಲಿ ಮುಳುಗಿ ಹೋಗುತ್ತದೆ.

ಅವರು ಹೊರಡುವ ವೇಳೆಗೆ ಮತ್ತೊಂದು ಗಂಟೆ ಕಳೆದಿತ್ತು.

ಇನ್ನೇನು ಕೋಟೆ ಬಂಗಲೆ ಹತ್ತಿರವಾಗತೊಡಗಿತ್ತು. ಹೇಮಂತ ಹೇಳಿದಂತೆ ಅವನಿಗೊಂದು ಮೆಸೇಜ್ ಮಾಡಿದ ಋತು ತಂದೆ ಪುರುಷೋತ್ತಮರಿಗೂ ತಾನು ಬರುತ್ತಿದ್ದೇನೆಂದು ಮೆಸೇಜ್ ಮಾಡಿದಳು.

**(ಸಶೇಷ)**